**ದಿನಾಂಕ: 02.02.2019, ರಂದು ಬೆಳಿಗ್ಗೆ 11-00 ಗಂಟೆಗೆ ಶ್ರೀ. ಜಿ.ಕೃಷ್ಣಮೂರ್ತಿ ಬಿ.ಬಿ.ಎಂ.ಪಿ ಸದಸ್ಯರು ವಾರ್ಡ್ ನಂ.99 (ರಾಜಾಜಿನಗರ) ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:**

**ಚರ್ಚಿಸಿದ ವಿಷಯಗಳು:**

1. ವಾರ್ಡ್-99 (ರಾಜಾಜಿನಗರ) ರಲ್ಲಿನ ಒಣ ಮತ್ತು ಹಸಿ ಘನತ್ಯಾಜ್ಯ ವಿಂಗಡಣೆ ಕಾರ್ಯ ಪ್ರಗತಿ ಕುರಿತು.
2. ವಾರ್ಡ್-99 ರ ರಸ್ತೆ ಕಾಮಗಾರಿಗಳ ಬಗ್ಗೆ ಚರ್ಚಿಸುವ ಕುರಿತು.
3. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.

**ಸಭೆಗೆ ಹಾಜರಾಗಿದ್ದವರ ವಿವರಗಳು:**

| ಕ್ರ.ಸಂ | ಹೆಸರು (ಶ್ರೀಯುತರು) | ಹುದ್ದೆ | ಸಹಿ |
|---|---|---|---|
| 1 | ಜಿ.ಕೃಷ್ಣಮೂರ್ತಿ<br>ಬಿ.ಬಿ.ಎಂ.ಪಿ ಸದಸ್ಯರು<br>ವಾರ್ಡ್ ನಂ.99 ರಾಜಾಜಿನಗರ | ಅಧ್ಯಕ್ಷರು | ಹಾಜರಿ |
| 2 | ಸಿ. ರೇಖಾ | ಸ.ಕಂ.ಅ(ರಾಜಾಜಿನಗರ) | ಹಾಜರಿ |
| 3 | ಕಾ.ನಿ.ಅ ಮತ್ತು ಸ.ಕಾ.ನಿ.ಅ | ರಾಜಾಜಿನಗರ | ಹಾಜರಿ |
| 4 | ಬೆಸ್ಕಾಂ/ಬಿ.ಡಬ್ಲ್ಯೂ.ಎಸ್.ಎಸ್.ಬಿ/ಕಿರಿಯ ಪರಿವೀಕ್ಷಕರು | ರಾಜಾಜಿನಗರ | ಹಾಜರಿ |
| 4 | ಸುಂದರ್. ಇ. ನಾಯಕ್ | ಸದಸ್ಯರು | ಹಾಜರಿ |
| 5 | ರಾಜಮ್ಮ | ಸದಸ್ಯರು | ಹಾಜರಿ |
| 6 | ವಿ. ವಿ. ಚಲುವರಾಜು | ಸದಸ್ಯರು | ಹಾಜರಿ |
| 7 | ಭಾರತಿ | ಸದಸ್ಯರು | ಗೈರು ಹಾಜರಿ |
| 8 | ರಾಜೇಶ್ವರಿ | ಸದಸ್ಯರು | ಗೈರು ಹಾಜರಿ |
| 9 | ಸದಾಶಿವರಾವ್ | ಸದಸ್ಯರು | ಗೈರು ಹಾಜರಿ |
| 10 | ಕೋದಂಡರಾಮ | ಸದಸ್ಯರು | ಗೈರು ಹಾಜರಿ |
| 11 | ಬಿ. ಹೆಚ್. ಮಹೇಶ್ | ಸದಸ್ಯರು | ಗೈರು ಹಾಜರಿ |
| 12 | ಕೆ. ಶಶಿಧರ | ಸದಸ್ಯರು | ಗೈರು ಹಾಜರಿ |
| 13 | ಜಿ. ಮಹೇಶ್ | ಸದಸ್ಯರು | ಗೈರು ಹಾಜರಿ |
| 14 | ಕಾ.ನಿ.ಅ ಮತ್ತು ಸ.ಕಾ.ನಿ.ಅ | ಸದಸ್ಯರು | ಗೈರು ಹಾಜರಿ |

ಸದಸ್ಯ ಕಾರ್ಯದರ್ಶಿಗಳು ಮಾತನಾಡುತ್ತಾ ಸಭೆಗೆ ಹಾಜರಾದ ಮಾನ್ಯ ಅಧ್ಯಕ್ಷರು, ಸದಸ್ಯರು ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಹಾಗೂ ವಿವಿಧ ಇಲಾಖೆಗಳಿಂದ ಬಂದಿದ್ದ ಅಧಿಕಾರಿಗಳಿಗೆ ಸ್ವಾಗತ ಕೋರಿದರು. ನಂತರ ಸದಸ್ಯರೆಲ್ಲರೂ ತಮ್ಮ ಪರಿಚಯ ಮಾಡಿಕೊಂಡರು. ವಾರ್ಡಿನಲ್ಲಿರುವ ಯಾವುದೇ ರೀತಿಯ ಸಮಸ್ಯೆಗಳನ್ನು ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸಲು ತಿಳಿಸಿದರು.

1. ಮಾನ್ಯ ಅಧ್ಯಕ್ಷರು ಮಾತನಾಡುತ್ತಾ ಬಹಳ ತಡವಾಗಿ ಸಭೆಯನ್ನು ನಡೆಸುತ್ತಿದ್ದು, ಇನ್ನು ಮುಂದೆ ಮಾನ್ಯ ಆಯುಕ್ತರವರ ಆದೇಶದಂತೆ ಪ್ರತಿ ಮಾಹೆಯ ಮೊದಲನೇ ಶನಿವಾರ ಸಭೆಯನ್ನು ನಡೆಸುವಂತೆ ತಿಳಿಸಿದರು ಹಾಗೂ ಇನ್ನು ಮುಂದೆ ಯಾವುದೇ ಇಲಾಖೆಯ ಅಧಿಕಾರಿಗಳಾಗಲೀ ಅಥವಾ ಸಭೆಯ ಅಧ್ಯಕ್ಷರ ಜೊತೆಗೆ ಸದಸ್ಯರೂ ಸಹ ಯಾವುದೇ ಕಾರಣ ತಿಳಿಸದೇ ತಪ್ಪದೇ ಸಭೆಗೆ ಹಾಜರಾಗುವಂತೆ ತಿಳಿಸಿದರು. ವಾರ್ಡಿನಲ್ಲಿ ಯಾವುದೇ ಸದಸ್ಯರು ಹಾಗೂ ಸಾರ್ವಜನಿಕರು ಸಹ ಸಭೆಯಲ್ಲಿ ಭಾಗಿ ಆಗಿ ಯಾವುದೇ ಸಮಸ್ಯೆಗಳಿದ್ದರೂ, ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ತಿಳಿಸಿದರು. ಸಭೆಗೆ ಯಾವುದೇ ಕಾರಣಕ್ಕೂ ಕೊರತೆ ಇಲ್ಲದಂತೆ ನೋಡಿಕೊಂಡು ಭಾಗವಹಿಸಿ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದರು. ಹಾಗೂ ಮೂರು ಇಲಾಖೆಯ ಅಧಿಕಾರಿಗಳು ಗೈರು ಹಾಜರಾಗಿದ್ದು, ಇನ್ನು ಮುಂದೆ ಹೀಗಾಗದಂತೆ ಕ್ರಮ ತೆಗೆದುಕೊಳ್ಳಲು ತಿಳಿಸಿದರು.
   **(ಕ್ರಮ**:- ದ್ವಿ.ದ.ಸ, ಸ.ಕಂ.ಅ (ರಾಜಾಜಿನಗರ) ಕಛೇರಿ ರವರು ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆಯುವುದು).
2. ಅಧ್ಯಕ್ಷರು ಮಾತನಾಡುತ್ತಾ ವಾರ್ಡ್-99 ರಾಜಾಜಿನಗರ ವ್ಯಾಪ್ತಿಗೆ ಕಂದಾಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆ ಏನೂ ಇಲ್ಲ ಎಂದು ತಿಳಿಸುತ್ತಾ, ಕಾಮಗಾರಿ ಇಲಾಖೆಯ ವಾರ್ಡ್ ವರ್ಕ್‌ಗೆ ಸಂಬಂಧಿಸಿದಂತೆ ಕೆಲವೊಂದು ಕೆಲಸಗಳು ವಿಳಂಬವಾಗಿದ್ದು, ಚುನಾವಣೆಯು ಹತ್ತಿರ ಬರುತ್ತಿರುವುದರಿಂದ ಅತಿ ಶೀಘ್ರವಾಗಿ ವಾರ್ಡಿನ ಕೆಲಸಗಳನ್ನು ಜರೂರಾಗಿ ಮಾಡಲು ಆದೇಶಿಸಿದರು.
   ಕ್ರಮ:- ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್‌ನ ಸಹಾಯಕ ಅಭಿಯಂತರರು
3. ವಾರ್ಡ್-99 ರ ಇಂದಿರಾನಗರ ಸ್ಲಮ್‌ನಲ್ಲಿ ಎಸ್.ಸಿ ಎಸ್.ಟಿ ವರ್ಗದವರಿದ್ದು, ಅವರುಗಳಿಗೆ ಒಂಟಿ ಮನೆ ನಿರ್ಮಾಣಕ್ಕಾಗಿ ಈಗಾಗಲೇ ಅರ್ಜಿಗಳನ್ನು ಅರ್ಜಿದಾರರು ನೀಡಿದ್ದು, ಪರಿಶೀಲಿಸಿದಾಗ ಕೆಲವು ದಾಖಲಾತಿಗಳು ಇಲ್ಲದಿರುವ ಫಲಾನುಭವಿಗಳನ್ನು ಕೈಬಿಟ್ಟು ದಾಖಲಾತಿಗಳು ಸರಿ ಇರುವ ಫಲಾನುಭವಿಗಳನ್ನು ಆಯ್ಕೆ ಮಾಡಿ ಕಳುಹಿಸಿಕೊಡುವಂತೆ ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಲಾಯಿತು.
   **ಕ್ರಮ**:- ಸ.ಕಂ.ಅ (ರಾಜಾಜಿನಗರ) ಕಛೇರಿ ರವರು ಪರಿಶೀಲಿಸುವುದು.
4. ಅಧ್ಯಕ್ಷರು ಮತ್ತು ಸದಸ್ಯರಾದ ರಾಜಮ್ಮ ರವರು ಮಾತನಾಡುತ್ತಾ ಕುಡಿಯುವ ನೀರಿನ ಸಮಸ್ಯೆಯಿದ್ದು, ಎರಡು ಗಂಟೆ ರಾತ್ರಿಯಲ್ಲಿ ನೀರು ಪೂರೈಕೆ ಮಾಡುತ್ತಿದ್ದು, ರಾತ್ರಿ ಹೊತ್ತಿನಲ್ಲಿ ನೀರು ಸಂಗ್ರಹಿಸಿಕೊಳ್ಳಲು ಜನರಿಗೆ ಅನಾನುಕೂಲ ಆಗುತ್ತಿರುವುದರಿಂದ ಅದನ್ನು ಸರಿಪಡಿಸಲು ತಿಳಿಸಿರುತ್ತಾರೆ.
   **ಕ್ರಮ**:- ಸಹಾಯಕ ಕಾರ್ಯಪಾಲಕ ಅಭಿಯಂತರರು ಜಲಮಂಡಳಿ ರಾಜಾಜಿನಗರ.
5. ವಾರ್ಡಿನಲ್ಲಿ ನಕ್ಷೆ ಮಂಜೂರಾತಿ ಮತ್ತು ರಸ್ತೆ ಅಗೆತದ ಅನುಮತಿಯನ್ನು ಪಡೆಯಲು ಮಧ್ಯವರ್ತಿಗಳ ಹಾವಳಿಯಿದ್ದು, ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಲು ಸೂಚಿಸಿದರು.
   **ಕ್ರಮ**:- ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ರಾಜಾಜಿನಗರ
6. ಅಧ್ಯಕ್ಷರು ಮತ್ತು ಸದಸ್ಯರು ಮಾತನಾಡುತ್ತಾ, 34ನೇ ಕ್ರಾಸ್, 2ನೇ ಬ್ಲಾಕ್‌ನಲ್ಲಿ ವಿದ್ಯುತ್‌ಗೆ ಸಂಬಂಧಿಸಿದ ವೈರ್ ಬಾಕ್ಸ್ ತುಕ್ಕು ಹಿಡಿದಿದ್ದು, ಅದನ್ನು ಕೂಡಲೇ ಸರಿಪಡಿಸಲು ತಿಳಿಸಿದರು
   **ಕ್ರಮ:**- ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ರಾಜಾಜಿನಗರ
7. ಸದಸ್ಯರು ಮಾತನಾಡುತ್ತಾ, ಕೆ.ಎಲ್.ಇ ಕಾಲೇಜು ಹತ್ತಿರ ಹಸು ಕಟ್ಟಿರುವುದರಿಂದ ಗಲೀಜು ಮಾಡಿ ಡ್ರೈನೇಜ್‌ಗೆ ಕಸವನ್ನು ಹಾಕುವುದರಿಂದ ಸಮಸ್ಯೆ ಜಾಸ್ತಿಯಾಗಿದ್ದು, ಸಾರ್ವಜನಿಕರು ದೂರನ್ನು ನೀಡಿರುವುದರಿಂದ ಅದನ್ನು ಸರಿಪಡಿಸಲು ತಿಳಿಸಿದರು.
   **ಕ್ರಮ**:- ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಜಾಜಿನಗರ

8. ಅಧ್ಯಕ್ಷರು ಮತ್ತು ಸದಸ್ಯರು ಮಾತನಾಡುತ್ತಾ, 41ನೇ ಅಡ್ಡರಸ್ತೆ, ಹಳೆಯ ಪೋಲೀಸ್ ಸ್ಟೇಷನ್ ಹತ್ತಿರ ಅಂಗಡಿಯ ಮಾಲೀಕರವರು ಫುಟ್‌ಪಾತ್‌ವರೆಗೂ ಸಾಮಾನು ಸರಂಜಾಮುಗಳನ್ನು ಅಂಗಡಿ ಇಟ್ಟುಕೊಂಡಿರುವವರು ಬೀದಿಗೆ ಬಂದು ವ್ಯಾಪಾರ ನಡೆಸುತ್ತಿರುವುದರಿಂದ ಜನರು ಓಡಾಡಲು ಅನಾನುಕೂಲವಾಗುತ್ತಿರುವುದರಿಂದ ಅಂತವರ ವಿರುದ್ಧ ಕ್ರಮ ಕೈಗೊಳ್ಳಲು ಹಾಗೂ ಲೈಸನ್ಸ್ ಅನ್ನು ರದ್ದು ಮಾಡಲು ಸೂಚಿಸಿರುತ್ತಾರೆ.
<u>**ಕ್ರಮ**:– ಕಿರಿಯ ಪರಿವೀಕ್ಷಕರು ರಾಜಾಜಿನಗರ</u>
9. ವಾರ್ಡಿನಲ್ಲಿ ತಪಾಸಣೆ ಕಾರ್ಯ ಕೈಗೊಳ್ಳುವುದಾಗಿ ಹಾಗೂ ಎಲ್ಲಾ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸೂಚಿಸಿದರು.

ಮಾನ್ಯ ಅದ್ಯಕ್ಷರು ಮಾತನಾಡುತ್ತಾ, ಮುಂದಿನ ಸಭೆಯಲ್ಲಿ ಎಲ್ಲಾ ಇಲಾಖಾ ಅಧಿಕಾರಿಗಳು ಮೇಲೆ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಂಡು ಅದರ ವರದಿಯೊಂದಿಗೆ ಮುಂದಿನ ಸಭೆಗೆ ಆಗಮಿಸಲು ಸೂಚಿಸಿದರು.

ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಕಂದಾಯ ಅಧಿಕಾರಿ (ರಾಜಾಜಿನಗರ) ಉಪವಿಭಾಗ ಆದ ಶ್ರೀಮತಿ.ರೇಖಾ.ಸಿ ರವರು ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ಧನ್ಯವಾದ ಕೋರುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ–ವಾರ್ಡ್ 99 ಹಾಗೂ
ಸಹಾಯಕ ಕಂದಾಯ ಅಧಿಕಾರಿ,
ರಾಜಾಜಿನಗರ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು:</u>
1. ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಮಂಡಿಸಿದೆ.
2. ಜಂಟಿ ಆಯುಕ್ತರು, (ಆರೋಗ್ಯ), (ಪಶ್ಚಿಮ) ರವರ ಅವಗಾಹನೆಗೆ ಮಂಡಿಸಿದೆ.
3. ಕೌನ್ಸಿಲ್ ಕಾರ್ಯದರ್ಶಿ ರವರ ಅವಗಾಹನೆಗೆ ಮಂಡಿಸಿದೆ.
4. ಕಾ.ಪಾ.ಅ (ಪಶ್ಚಿಮ) ರವರ ಮಾಹಿತಿಗಾಗಿ.
5. ವಾರ್ಡ್ 99 ರ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ರವರಿಗೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರು, ಬೆಸ್ಕಾಂ/ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ.